ಹತ್ತು ತಿಂಗಳ ಪ್ರಾಯ. ತನ್ನಿಬ್ಬರು ತಂಗಿಯರ ಜೊತೆ ಒಣ ಹುಲ್ಲಿನಲ್ಲಿ ಅಡಗಿ ಕೂತು ಮಳ್ಳಿಯಂತೆ ಈಕೆ ಇಣುಕಿ ನೋಡಿದ್ದಳು. ಅವ್ವನ ಬೇಟೆ ಮಾಂಸಕ್ಕಾಗಿ ಕಾಯುತ್ತಿದ್ದಳು. ಈಗ ನೋಡಿದರೆ ಇವಳೇ ಸಾಕುವ ಅವ್ವಳಾಗಿದ್ದಾಳೆ. ತನ್ನ ಮಕ್ಕಳನ್ನು ಭಾಂಗ್‌ವಾಲ ಏರಿಯಾದಲ್ಲಿ ಮುಚ್ಚಿಟ್ಟಿರುವ ಈಕೆಯೇ ಇಲ್ಲಿನ ಒಡತಿ. ಇನ್ನು ಇವಳಿಬ್ಬರ ತಂಗಿಯರು ಈಗ ಪೇಡ್ವಾಲಿ ಮತ್ತು ಗೇಟಿಯಾರೋ ಎಂಬ ಹೆಸರು ಪಡೆದು ಈ ಜಾಗದಿಂದ ಆರೇಳು ಮೈಲು ದೂರ ಹೋಗಿ ನೆಲೆಸಿದ್ದಾರೆ.

ಪಾರ್ವಾಲಿಗೆ ಈಗ ಮೂರು ಮಕ್ಕಳು. ಒಂದು ಗಂಡು ಉಳಿದೆರಡು ಹೆಣ್ಣು. ತಾಯಿಯನ್ನು ಮೀರಿ ಬೆಳೆದು ದಷ್ಟಪುಷ್ಟವಾಗಿರುವ ಮಕ್ಕಳ ನಡುವೆ ಪಾರ್ವಾಲಿಯೇ ಸಣಕಲಾಗಿ ಕಾಣುತ್ತಿದ್ದಾಳೆ. ತಾನು ಹುಟ್ಟಿ ಬೆಳೆದ, ಆಡಿ ನಲಿದ, ತವರು ನೆಲದಲ್ಲೇ ತನ್ನ ದಾಂಢಿಗ ಮಕ್ಕಳನ್ನು ಸಾಕುತ್ತಿದ್ದಾಳೆ. ಎರಡನೆಯ ದಿನವಾದರೂ ನಾನವಳನ್ನು ನೋಡಲು ಆಗಿಲ್ಲ. ಇಲ್ಲೇ ಸುತ್ತಮುತ್ತ ಎಲ್ಲೋ ಇದ್ದಾಳೆ ಎನ್ನುವ ಖಚಿತ ಸುಳಿವು ಸಿಕ್ಕು ನಿಶ್ಯಬ್ದವಾಗಿ ಬಂದು ನಿಂತಿದ್ದೇವೆ.

ನಮಗೆ ಕಾಣದ ಆದರೆ ಕೇಳಬಹುದಾಗಿದ್ದ ಪೊದೆಗಳ ನಡುವಿನಿಂದ ಪ್ರಬಲ ಘರ್ಜನೆಯ ಸದ್ದು ಕೇಳಿಬರುತ್ತಿವೆ. ಹುಲಿಯ ಘೋರ ಘರ್ಜನೆ ತೀರಾ ಹತ್ತಿರದಲ್ಲೇ ಒಮ್ಮೆ ನಿಂತು ಕೇಳಿ ನೋಡಿ ಖಂಡಿತಾ ಬೀಜಗಳು ಬಾಯಿಗೆ ಬಂದು ಹೋಗುವ ಅನುಭವ ಪಡೆಯಬಹುದು. ಎದೆ ಪತರಗುಟ್ಟಿ, ಮೈ ಜುಮ್ ಎಂದು ರಕ್ತ ಹೆಪ್ಪುಗಟ್ಟುತ್ತದೆ. ಮೈ ಮೇಲಿನ ಮುಳ್ಳುಗಳು ಗಾಬರಿಯಲಿ ಎದ್ದು ನಿಂತವು. 'ತಿಂದು ಸೊಕ್ಕಿದ ಪಾರ್ವಾಲಿಯ ಮಕ್ಕಳ ಗಾಂಚಾಲಿ ಕೂಗಿದು' ಎಂದು ಡ್ರೈವರ್ ನಕ್ಕನು.

ಪಾರ್ವಾಲಿ ಬೇಟೆಗೆ ಹೊರಡುವ ಸಮಯವಾಗುತ್ತಿದೆ. ಆದರೆ ಅವಳ ದನಿ ಎಲ್ಲಿಂದಲೂ ಕೇಳಿ ಬರುತ್ತಿಲ್ಲ. ಬೇಟೆಗೆ ಹೊರಟಾಗ ಇವಳು ಮೌನವಾಗುತ್ತಾಳೆ. ಸಪ್ಪಳವಿಲ್ಲದ ಹೆಜ್ಜೆ ಧರಿಸುತ್ತಾಳೆ. ಮಕ್ಕಳ ಘರ್ಜನೆಯ ಕೇವಲ ಹದಿನೈದು ಅಡಿ ದೂರದಿಂದ ನಮಗೆ ಕೇಳಿಸುತ್ತಿದೆ. ನಾವು ನಿಂತಿದ್ದ ದಿಕ್ಕಿಗೆ ವಿರುದ್ಧವಾಗಿ ಒಂದು ಬೆಟ್ಟವಿದೆ. ಅತ್ತ ಕಡೆಗೆ ನಮ್ಮ ಗಮನವಿಲ್ಲ. ನದಿ ಕಡೆಯಿಂದ ಅವಳು ಬರಬಹುದೆಂದು ಗಮನಿಸುವಾಗ ಪಾರ್ವಾಲಿ ನಿಶ್ಯಬ್ದವಾಗಿ ನಮ್ಮ ಹಿಂದೆ ಬಂದು ನಿಂತಿದ್ದಳು. ಅವಳೀಗ ಬೇಟೆಯಾಡುವ ಮೂಡಿನಲ್ಲಿರುವ ಕಾರಣ ನಮ್ಮ ಇರುವಿಕೆ ಬಗ್ಗೆ ಆಕೆ ಕೇರ್ ಮಾಡಲಿಲ್ಲ. ಕತ್ತು ಎತ್ತರಿಸಿ, ಮೂಗು ಮುಂದು ಮಾಡಿ, ಗಾಳಿ ಜಾಡು ಗುರುತಿಸುತ್ತಿದ್ದಳು. ಅವಳಿಗೆ ಏನೋ ಒಂದು ಸುಳಿವು ವಾಸನೆಯ ಮೂಲಕ ಸಿಕ್ಕಿದೆ.

ಈಗ ನಮ್ಮ ಪಾಲಿಗೆ ಪುಣ್ಯದ ಕ್ಷಣವೊಂದು ಸಿಗಬಹುದು ಎಂಬ ಆಸೆ ಹುಟ್ಟಿದೆ. ಹುಲಿ ಬೇಟೆಯಾಡುವ ನೇರ ದೃಶ್ಯವೊಂದು ಸಿಕ್ಕರೆ ಅದು ಜೀವಮಾನದ ಪುಣ್ಯ. ನೈಸರ್ಗಿಕ ಕಾಡಲ್ಲಿ ಹುಲಿಯನ್ನೇ ನೋಡದ ಅದೆಷ್ಟೋ ಜನ ಇರುವಾಗ ಹುಲಿಭೇಟಿ ನಮಗೊಂದು ಸೌಭಾಗ್ಯವಲ್ಲವೇ? ಮುಂದಿನ ಮೈದಾನದ ಒಣ ಹುಲ್ಲುಗಳ ನಡುವೆ ಜಿಂಕೆಯ ಒಂದು ಕುಟುಂಬ ಹುಲ್ಲು ಮೆಯ್ಯುತ್ತಿದೆ. ಪಾರ್ವಾಲಿಯ ಚಾಲಾಕಿ ಕಣ್ಣುಗಳು ಇದನ್ನು ಗಮನಿಸುತ್ತಿವೆ. ಈಗ ಇವಳ ಗಮನ ಸಣ್ಣ ಮರಿಯ ಮೇಲೆ ನೆಟ್ಟಿದೆ. ಯಾಕೆಂದರೆ ಅದು ಸುಲಭ ತುತ್ತು. ವಾಸನೆ ಜಾಡು ಖಚಿತವಾಗುತ್ತಲೇ ನಿಂತಿದ್ದ ಇವಳು ನೆಲದಲ್ಲೇ ತೆವಳತೊಡಗಿದಳು. ತನ್ನ ಮೈಯ ವಾಸನೆ ಅವಕ್ಕೆ ಗೊತ್ತಾಗಬಾರದೆಂದೇ ಗಾಳಿ ಬೀಸುವ ವಿರುದ್ಧ ದಿಕ್ಕಿನಿಂದ ಆಕೆ ಬರುತ್ತಿದ್ದಾಳೆ. ಜಿಂಕೆಗಳು ಬಲು ಬೇಗನೇ ಚಿರತೆ ಮತ್ತು ಹುಲಿಗಳ ಮೈವಾಸನೆ ಗ್ರಹಿಸಿ ಜಾಗೃತವಾಗುತ್ತವೆ. ಈ ಕಾರಣಕ್ಕೆ ಚತುರೆ ಪಾರ್ವಾಲಿ ಗಾಳಿಯ ವಿರುದ್ಧ ಚಲಿಸುತ್ತಾ ಆಕ್ರಮಣದ ಹೊಂಚು ರೂಪಿಸಿದ್ದಾಳೆ.

ನಮಗೀಗ ಪಾರ್ವಾಲಿ ಖಂಡಿತಾ ಜಿಂಕೆ ಹೊಡೆಯುತ್ತಾಳೆ ಎಂಬುದು ಖಚಿತವಾಯಿತು. ನಾವು ಉಸಿರು ಬಿಗಿ ಹಿಡಿದು

